ಕಿವಿ ಬೆಚ್ಚಗಾಗುತ್ತಾ, ಕುತ್ತಿಗೆ, ಮುಖವೆಲ್ಲ ಬೆವರುತ್ತ, ಬೆಳ್‌ಬೆಳಗ್ಗೆ ಈ ಹಾಟ್ ಫ್ಲಾಶಸ್‌ಗಳ ರಗಳೆ ಬೇರೆ ಎಂದುಕೊಳ್ಳುತ್ತಲೇ, 'ಹೋಗಲಿ... ಕಾಫಿ ಕುಡಿದ್ಯಾ? ಮತ್ತೆ ತಿಂಡಿ ಏನು ಮಾಡಿಕೋತಿದ್ದೀಯಾ?' ದನಿಯನ್ನು ಮೃದುವಾಗಿಸಲು ಯತ್ನಿಸುತ್ತ, ದೈನಿಕದ ಪ್ರಶ್ನೆಗಳಿಗೆ ಮರಳಿದಳು. 'ಹೂಂ ಕಣೇ... ರಾತ್ರಿ ಮೂರು ಗಂಟೆ ಮೇಲೆ ಸ್ವಲ್ಪ ಕಣ್ಣು ಹತ್ತಿತ್ತು... ಮತ್ತೆ ಐದೂವರೆಗೆ ಎಚ್ಚರವಾಯ್ತು. ಬೇಗ ಎದ್ದಿದ್ದೆನಲ್ಲ, ಆವಾಗ್ಲೇ ಕಾಫಿ ಕುಡಿದೆ. ಸರಿ, ನಿಂಗೂ ತಡವಾಗುತ್ತೆ ಆಫೀಸಿಗೆ... ಮತ್ತೆ ಮಾತಾಡಣ' ಎಂದ ಮೇಗಲೆ ಫೋನ್ ಇಟ್ಟಳು. ಎಡ ಮುಂಗೈಯಿಂದ ಬೆವರು ಒರೆಸಿಕೊಳ್ಳುತ್ತ, ಫ್ಯಾನ್ ಹಾಕು ಎಂದು ರಮೇಶನಿಗೆ ಹೇಳುತ್ತ, ಅರ್ಧ ಹೆಚ್ಚಿದ ಈರುಳ್ಳಿಯನ್ನು ಅಲ್ಲಿಯೇ ಇಟ್ಟು, ಕೈತೊಳೆದು ಟೇಬಲ್ಲಿನ ಬಳಿ ಬಂದವಳಿಗೆ ಕುರ್ಚಿ ಎಳೆದುಕೊಟ್ಟ ರಮೇಶ, 'ಯಾರು ಮೇಗಲೆಯವರಾ... ನೀನ್ಯಾಕೆ ಅಷ್ಟು ಜೋರು ಮಾಡಿದ ಹಂಗೆ ಮಾತಾಡುತ್ತಿದ್ದೆ...' ಎನ್ನುತ್ತಿದ್ದಂತೆ ವಿನುತಾಳಿಗೆ ಇನ್ನಷ್ಟು ರೇಗಿತು.

'ಹೌದಪ್ಪ... ನಾನು ಮಾತಾಡದೇ ಹಂಗೆ... ಮೆತ್ತಗೆ ಮಾತಾಡದು ಹೆಂಗೆ ಅನ್ನೋದನ್ನೂ ನಿನ್ ಹತ್ರಾನೆ ಕಲೀತೀನಿ ಇರು' ಎಂದು ರೇಗಿಯೇಬಿಟ್ಟಳು. 'ನನ್ ಹತ್ರ ಕಲಿತುಕೋ ಅಂತ ನಾನೆಲ್ಲಿ ಹೇಳಿದೆ' ಎಂದು ಹೇಳ ಹೊರಟವನಿಗೆ ಥಟ್ಟನೆ 'ಅಮ್ಮ ಇತ್ತೀಚೆಗೆ ಚಿಕ್ಕಪುಟ್ಟದ್ದಕ್ಕೂ ಕಿರಿಕಿರಿ ಮಾಡಿಕೊಂಡು ರೇಗುತಾಳೆ, ಹಾರ್ಮೋನುಗಳ ಏರುಪೇರು ಸಹಜ ಪಪ್ಪ, ನೀನು ಮಾತು ಬೆಳೆಸಬೇಡ, ಸುಮ್ಮನಿದ್ದು ಬಿಡು' ಎಂದು ಮಗಳು ವಿಭಾ ಹೇಳಿದ್ದು ನೆನಪಾಗಿದ್ದೇ ರಮೇಶ ಬಾಯಿ ಮುಚ್ಚಿಕೊಂಡ. 'ಬದನೇಕಾಯಿ ಪಲ್ಯ ಮಾಡ್ತೀಯ... ನಾನು ಹೆಚ್ಚಲಾ' ಎನ್ನುತ್ತ ಅರ್ಧ ಹೆಚ್ಚಿದ್ದ ಈರುಳ್ಳಿಯನ್ನು ಪೂರ್ಣ ಹೆಚ್ಚಿ, ಪ್ಲೇಟಿನಲ್ಲಿ ತೆಗೆದಿಟ್ಟು, ಪಕ್ಕದಲ್ಲಿಯೇ ಇಟ್ಟಿದ್ದ ಬದನೇಕಾಯಿಯನ್ನು ತೊಳೆದು, ಒರೆಸಿ, ಹೆಚ್ಚಲು ಅಣಿಯಾದ.

ಅವಳು ಫೋನಿನಲ್ಲಿ ಕ್ಯಾಲೆಂಡರ್ ನೋಡುವುದನ್ನು ಕಡೆಗಣ್ಣಿನಿಂದ ಗಮನಿಸಿದ ರಮೇಶನಿಗೆ ಇವತ್ತು ಇವಳನ್ನು ಆಫೀಸಿಗೆ ತಾನೇ ಬಿಟ್ಟುಹೋಗುವುದು ಒಳ್ಳೆಯದು ಅನ್ನಿಸಿತು. ಮತ್ತೆ ಇಬ್ಬರೂ ಮಾತಾಡಲಿಲ್ಲ. ಅವಳು ಪಲ್ಯ ಮಾಡುತ್ತಿದ್ದಂತೆ, ರಮೇಶ ಇಬ್ಬರಿಗೂ ಮಧ್ಯಾಹ್ನ ಊಟಕ್ಕೆ ಕಟ್ಟುವ ಡಬ್ಬಗಳನ್ನು ಎತ್ತಿಟ್ಟ. ವಿನುತಾ ಚಪಾತಿ ಲಟ್ಟಿಸುವಾಗ, ಪಕ್ಕದಲ್ಲಿ ನಿಂತು ಬೇಯಿಸಿದ. 'ನೀನು ಸ್ನಾನ ಮಾಡಿ ಬಾ... ನಾ ಇಬ್ಬರಿಗೂ ಡಬ್ಬಿ ಕಟ್ಟುತೀನಿ' ಅಂದ. 'ಇನ್ನೂ ತಿಂಗಳೂ ಆಗಿಲ್ಲ... ಪೀರಿಯೆಡ್ಸ್ ಶುರುವಾಯಿತು. ಎಷ್ಟೋ ಹೆಣ್ಣುಮಕ್ಕಳಿಗೆ ನಲ್ವತ್ತೈದು ನಲ್ವತ್ತಾರಕ್ಕೆ ಮುಟ್ಟು ನಿಲ್ಲುತ್ತಂತೆ... ನಂಗೆ ಇನ್ನೂ ಎಷ್ಟು ವರ್ಷ ಇದ್ರ ಗೋಳಾಟನೋ ಗೊತ್ತಿಲ್ಲ... ಅದಕ್ಕೂ ಪುಣ್ಯ ಮಾಡಿ ಬಂದಿರಬೇಕು. ಸಾಕಾಯಿತಪ್ಪ...' ವಿನುತಾ ತನ್ನಷ್ಟಕ್ಕೆ ಜೋರಾಗಿ ಗೊಣಗಿಕೊಳ್ಳುತ್ತಾ ಬಚ್ಚಲಿಗೆ ನಡೆದಳು. ಮುಟ್ಟು ನಿಲ್ಲೋದಕ್ಕೆ ಯಾವ ಪುಣ್ಯ ಮಾಡಿ ಬರಬೇಕಪ್ಪ ಎನ್ನಿಸಿ ರಮೇಶನ ಮುಖದಲ್ಲಿ ಕಿರುನಗೆ ಮೂಡಿದರೂ, ಅವಳಿಗೆ ಕಾಣದಂತೆ ಅಡಗಿಸಿಕೊಂಡ. 'ಇವತ್ತು ತಡವಾದ್ರೂ ಪರವಾಗಿಲ್ಲ, ನಾನೇ ಕಾರಲ್ಲಿ ಬಿಟ್ಟು ಹೋಗತೀನಿ. ಆಟೋದಲ್ಲಿ ಹೋಗಿ ಹೊಟ್ಟೆ ನೋವು ಜಾಸ್ತಿಯಾಯಿತು ಅಂತ ಗೋಳಾಡಬೇಡ' ರಮೇಶ ಹೇಳಿದಾಗ ಮರುಮಾತಿಲ್ಲದೆ ವಿನುತಾ ಊಂಗುಟ್ಟಿದಳು.

ಕೆಲಸ ಮುಗಿಸಿ, ಸಿದ್ಧವಾಗುವ ಧಾವಂತದಲ್ಲಿ ಹಿಂದೆ ಸರಿದಿದ್ದ ಮೇಗಲೆಯೊಂದಿಗಿನ ಮಾತುಕತೆ ಕಾರಿನಲ್ಲಿ ಕೂತಾಗ ಮತ್ತೆ ನೆನಪಾಗುತ್ತ... ನಾನು ಒರಟಾಗಿ ಮಾತಾಡಿದೆನಾ ಎಂದುಕೊಳ್ಳುತ್ತಾ... ಆದರೆ ನಾನು ಹೇಳಿದ್ದರಲ್ಲಿ ತಪ್ಪೇನಿತ್ತು ಎಂದು ತನ್ನನ್ನೇ ಸಮರ್ಥಿಸಿಕೊಳ್ಳುತ್ತಾ... ಅಷ್ಟೇ ಥಟ್ಟನೆ ನೆನಪಾಗಿದ್ದು, ಆತ್ಮಹತ್ಯೆ ಮಾಡಿಕೊಂಡಿದ್ದ ನಾಲ್ಕಾರು ರೈತ ಕುಟುಂಬದವರ ಸಮೀಕ್ಷೆಯ ಆಡಿಯೋವನ್ನು ಕನ್ನಡದಿಂದ ಇಂಗ್ಲಿಷಿಗೆ ಟ್ರಾನ್ಸ್‌ಕ್ರೈಬ್ ಮಾಡಿಕೊಡುವಾಗ ಒಬ್ಬಳು ಹೆಣ್ಣುಮಗಳು ಹೇಳಿದ ಮಾತು. ಮನೆಯಲ್ಲಿ ಇಬ್ಬರು ಚಿಕ್ಕ ಮಕ್ಕಳು, ಜೊತೆಗಿರುವ ವಯಸ್ಸಾದ ಅತ್ತೆ, ಮಾವ, ಅವರ ಅನಾರೋಗ್ಯ, ಇಷ್ಟು ಜನರ ಹೊಟ್ಟೆ ತುಂಬಲು ಬೆಳಗಿನಿಂದ ಸಂಜೆವರೆಗೂ ದುಡಿಯುತ್ತಿರುವ ತನಗೆ ಕೂತು ಅಳುವುದಕ್ಕೂ ಪುರುಸೊತ್ತಿಲ್ಲ ಎಂದು ಹೇಳುತ್ತಾ, 'ಕಣ್ಣೀರಿಗೂ ಬಡತನ ಬಂದಂಗೆ ಆಗೈತೆ' ಎಂದಿದ್ದಳು. ತಮಗಿರುವ ಒಂದೆಕರೆ ಜಮೀನಿನ ಉತ್ಪತ್ತಿ ಯಾವುದಕ್ಕೂ ಸಾಲುವುದಿಲ್ಲ, ಬೇರೆಯವರ